**ದಿ: 12.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಅವಕಾಶ ನೀಡಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ. ಆರ್ ಜಿ ಎಮ್ ವಕೀಲರಿಂದ:**

ನಿಡಿ-31 ರಲ್ಲಿ ಕೆ ಎನ್ ದೇಸಾಯಿ, ಎಮ್ ಆರ್ ಗುಡಿ, ಟಿ ಯು ಜೋಯಿಶಿ ಎನ್ನುವವರ ಹೆಸರು ನಮೂದು ಇರುತ್ತವೆ ಎಂದರೆ ನಿಜ. ಅವರಲ್ಲಿ ಕೆ ಎನ್ ದೇಸಾಯಿ ವಾದಿಯ ಅಜ್ಜ ಎಂದರೆ ನಿಜ. ಸದರಿ ಪ್ರಕರಣ ದಾವಾ ಆಸ್ತಿಯನ್ನು ಬಿಟ್ಟು ಕೊಡುವ ಸಲುವಾಗಿ ನಡೆದಿತ್ತು ಎಂದರೆ ನಿಜ. ನಿಡಿ-31 ರಲ್ಲಿ ಟಿ ಯು ಜೋಯಿಶಿ ಇವರಿಗೆ ಬರಬೇಕಾದ ಹಣ ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿ ಅಸೆಸಮೆಂಟ ಹಣ ಎನ್ನುತ್ತಾರೆ. ಸದರಿ ಪ್ರಕರಣದಲ್ಲಿ ಮಾಲೀಕತ್ವದ ಬಗ್ಗೆ ಯಾವುದೇ ಪ್ರಸ್ತಾಪ ಇರಲಿಲ್ಲ ಕೇವಲ ಕಬ್ಜೆ ಸಲುವಾಗಿ

ಪ್ರಕರಣ ನಡೆದಿತ್ತು ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ಮದ್ವತಾಚಾರ್ಯ ಗುಡಿ ಹಾಗೂ ಕೆ ಎನ್ ದೇಸಾಯಿ ಇವರ ಮಧ್ಯ ವಿವಾದ ಇರಲಿಲ್ಲ ಹಾಗೂ ಅವರ ಹೆಸರು ಇರಲಿಲ್ಲ ಎಂದರೆ ಸರಿಯಲ್ಲ. ನಿಡಿ-**31** ರಲ್ಲಿ ಭಕ್ಷಿಸ ಪತ್ರದ ಬಗ್ಗೆ ಯಾವುದೇ ಉಲ್ಲೇಖ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಪ್ರಕರಣ ಕೇವಲ ಕಬ್ಜೆ ಸಲುವಾಗಿ ಮಾತ್ರ ಇತ್ತು ಎಂದರೆ ನಿಜ. ಜಮೀನಿನ ಕಬ್ಜೆಯನ್ನು ಯಾರು ಯಾರಿಗೆ ಕೊಡಬೇಕು ಎನ್ನುವ ಬಗ್ಗೆ ನಿಡಿ-**31** ರಲ್ಲಿ ಉಲ್ಲೇಖಿಸಿಲ್ಲ ಎಂದರೆ ಸರಿಯಲ್ಲ. ನಿಡಿ-**31** ದಿಃ **10.10.1957** ರ ಪತ್ರ ಅದು ಆದೇಶವಲ್ಲ ಎಂದರೆ ಸರಿಯಲ್ಲ. ನಿಡಿ-**31** ರ ಪ್ರಕಾರ ಎಮ್ ಆರ್ ಗುಡಿ ಜಮೀನಿನ ಮಾಲೀಕರು ಎಂದು ಎಲ್ಲೂ ನಮೂದಿಸಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವ ಹಾಗೆ ತಹಶೀಲ್ದಾರ ಕಚೇರಿಯ ಆದೇಶದ ಉಲ್ಲೇಖ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮೌಖಿಕ ಸಾಕ್ಷ್ಯಕ್ಕೆ ವೈತರಿತ್ಯವಾಗಿದೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ದಾಖಲೆ ನಿಜವಾಗಿರುತ್ತದೆ.

ದಿಃ **20.10.1957** ರಂದು ನೀಡಿದ ಮಾಹಿತಿ ಪತ್ರ ಅದು ಯಾವುದೇ ಆದೇಶ ಪತ್ರವಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಯಲ್ಲಿ ದಾವಾ ಆಸ್ತಿ ಮಾಲೀಕತ್ವದ ಬಗ್ಗೆ ಹಾಗೂ ಭಕ್ಷಿಸ ಪತ್ರದ ಬಗ್ಗೆ ಉಲ್ಲೇಖವಿಲ್ಲ ಎಂದರೆ ಸರಿಯಲ್ಲ. ದಿಃ **20.10.1957** ರ ದಾಖಲೆ ನಿಡಿ-**31** ರ ಭಾಗ ಎಂದರೆ ನಿಜ. ವಾದಿಯರು ದಾವಾ ಆಸ್ತಿಯ ಸಂಪೂರ್ಣ ಮಾಲೀಕರು ಎಂದರೆ ಸರಿಯಲ್ಲ. ವಾದಿಯ ಅಜ್ಜ ಮರಣ ಹೊಂದಿದ ನಂತರ ವಾರಸಾ ಪ್ರಕಾರ ವಾದಿಯರು ದಾವಾ ಆಸ್ತಿಯ ಮಾಲೀಕರು ಹಾಗೂ ಕಬ್ಜೆದಾರರು ಎಂದರೆ ಸರಿಯಲ್ಲ. ನಿಡಿ-**33** ರಲ್ಲಿ ಕಬ್ಜಾ ವಹಿವಾಟಿನ ಬಗ್ಗೆ ಮಾತ್ರ ಉಲ್ಲೇಖವಿರುತ್ತದೆ ಎಂದರೆ ಸರಿಯಲ್ಲ. ಕೆ ಎನ್ ದೇಸಾಯಿ ರವರು ದಾವಾ ಆಸ್ತಿಯ ಮಾಲೀಕರು ಹಾಗೂ ಕಬ್ಜೆದಾರರು ಅಲ್ಲ ಎಂದು ಯಾವುದೇ ಆದೇಶವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-**33** ರಲ್ಲಿ ಬರೆದಿರುವುದು ಸತ್ಯವಾಗಿದೆ.

ನಿಡಿ-**34** ರಲ್ಲಿ ಮದ್ವಾಚಾರ್ಯ, ಪದ್ಮಾವತಿ, ಸುಭದ್ರ, ದಮಯಂತಿ ಮತ್ತು ಗುರುರಾಜ ಇವರು ಹೆಸರು ದಾಖಲಿರುತ್ತವೆ. ಸುಭದ್ರಾ ಇವರು ಮದುವೆಯಾದ ನಂತರ ಲಕ್ಷ್ಮೀ ಕೋಂ. ವಾದಿರಾಜ ಬಾಗಲ್ ಎಂದು ನಮೂದಾಗಿರುತ್ತದೆ. ಪ್ರೇಮಾ ಎಂದರೆ ಪದ್ಮಾವತಿ. ದಿಃ**17.07.1969** ರ ಆದೇಶದ ಮೇರೆಗೆ ಹೆಸರುಗಳು ವಾರಸಾ ನಾತೆಯಿಂದ ದಾಖಲಾಗಿರುತ್ತವೆ ಎಂದರೆ ಸರಿಯಲ್ಲ. ಸದರಿ ಅವರು ಮದ್ವಾಚಾರ್ಯ ರಾಮಾಚಾರ್ಯ ಗುಡಿ ಇವರ ವಾರಸುದಾರರು ಎಂದರೆ ನಿಜ. ಸಾಕ್ಷಿ ಮುಂದುವರೆದು ಮದ್ವಾಚಾರ್ಯ ಇವರು ಬರೆದು ಕೊಟ್ಟ ಹಕ್ಕು ಬಿಟ್ಟ ಪತ್ರದ ಪ್ರಕಾರ ಹೆಸರು ದಾಖಲಾಗಿರುತ್ತವೆ ಎಂದು ಸ್ವತಃ ನುಡಿಯುತ್ತಾರೆ. ದಿಃ**02.01.1943** ರ ಆದೇಶದ ಪ್ರಕಾರ ಪದ್ಮಾವತಿ, ಸುಭದ್ರ, ದಮಯಂತಿ ಮತ್ತು ಗುರುರಾಜ ರವರ ಹೆಸರುಗಳು ನಿಡಿ-**32** ರಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ದಾಖಲೆಯನ್ನು ಪರಿಶೀಲಿಸಿ ಅವರ ಹೆಸರುಗಳು ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ-**34** ರಲ್ಲಿ ನಾಲ್ಕು ಜನ ಮಕ್ಕಳ ಹೆಸರುಗಳು ಇರುತ್ತವೆ ಎಂದರೆ ನಿಜ. ದಿಃ **02.01.1943** ರ ಹಕ್ಕು ಬಿಟ್ಟ ಪತ್ರಕ್ಕೆ

ಮದ್ವಾಚಾರ್ಯ ರ ಮಕ್ಕಳು ಸಹಿ ಮಾಡಿಲ್ಲ ಹಾಗೂ ಹಕ್ಕು ಬಿಟ್ಟು ಕೊಟ್ಟಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾಲ್ಕು ಜನ ಮಕ್ಕಳಿಗೆ ಹಕ್ಕು ಇರಲಿಲ್ಲ ಆದ್ದರಿಂದ ಅವರು ಹಕ್ಕು ಬಿಟ್ಟ ಪತ್ರಕ್ಕೆ ಸಹಿ ಮಾಡಿಲ್ಲ ಎಂದರೆ ಗೊತ್ತಿಲ್ಲ. ನಿಡಿ-32 ರ ದಾಖಲೆ ಮದ್ವಾಚಾರ್ಯ ಗುಡಿ ಅವರಿಗೆ ಸಂಬಂಧಿಸಿದಲ್ಲ ಎಂದರೆ ಸರಿಯಲ್ಲ. ನಿಡಿ-32 ರ ದಾಖಲೆ ಮದ್ವಾಚಾರ್ಯ ರ ಮಕ್ಕಳಿಗೆ ಸಂಬಂಧಪಟ್ಟಿದಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ ನಂ. 3(ಎ) ದಿಂದ (ಡಿ) ರವರು ಮದ್ವಾಚಾರ್ಯರ ವಾರಸುದಾರರು ಅವರನ್ನು ವಾದಿಯರು ಪಕ್ಷಗಾರರನ್ನಾಗಿ ಮಾಡಿದ್ದಾರೆ ಎನ್ನುವುದು ಸುಳ್ಳು. ಸದರಿಯವರು ದಾವಾ ಆಸ್ತಿಗೆ ಹಕ್ಕು ಹಿತ ಸಂಬಂಧ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಯ ಹೆಸರು ಹನುಮಂತಾಚಾರ್ಯ ರಾಘವೇಂದ್ರಚಾರ್ಯ ಗುಡಿ. ನಮ್ಮ ತಾಯಿ ಪೂರ್ಣ ಹೆಸರು ಸತ್ಯವತಿ ಹನುಮಂತಾಚಾರ್ಯ ಗುಡಿ. ನಮ್ಮ ಕುಟುಂಬಕ್ಕೆ ಗುಡಿ ಎನ್ನುವ ಅಡ್ಡ ಹೆಸರನ್ನು ಹೊರತುಪಡಿಸಿ ಬೇರೆ ಯಾವುದೇ ಹೆಸರು ಇರುವುದಿಲ್ಲ. ನಮ್ಮ ತಾಯಿ ಹೆಸರು ಸತ್ಯವತಿ ಆದರೆ ಅವರನ್ನು ತಾರಾಬಾಯಿ ಎಂದು ಕರೆಯುತ್ತಿದ್ದರು. ನಮ್ಮ ತಾಯಿ ತವರು ಮನೆಯಲ್ಲಿ ಅವರ ಹೆಸರನ್ನು ನಾಗುಬಾಯಿ ಎಂದು ಕರೆಯುತ್ತಿದ್ದರು. ಈ ಹೆಸರುಗಳನ್ನು ಹೊರತುಪಡಿಸಿ ನಮ್ಮ ತಾಯಿಗೆ ಯಾವುದೇ ಹೆಸರುಗಳು ಇರುವುದಿಲ್ಲ. ಸೀತಾಬಾಯಿ ಇವರು ಮದ್ವಾಚಾರ್ಯ ಇವರ ಹೆಂಡತಿ. ಹನುಮಂತಾಚಾರ್ಯ ರಾಘವೇಂದ್ರಚಾರ್ಯ ಗುಡಿ ಇವರ ತಾಯಿಯ ಹೆಸರು ಸೀತಾಬಾಯಿ. ನಿಡಿ-32 ರಲ್ಲಿ ನಮೂದಿಸಿದ ಮದ್ವಾಚಾರ್ಯ ಹಾಗೂ ಹನುಮಂತಾಚಾರ್ಯ ಇವರ ಸಂಬಂಧ ತಂದೆ ಮಗ. ನಿಡಿ-32 ರಲ್ಲಿ ನಮೂದಿಸಿದ ಹನುಮಂತಾಚಾರ್ಯ ಮದ್ವಾಚಾರ್ಯ ಗುಡಿ ಇವರು ನಮ್ಮ ತಂದೆ. ನಿಡಿ-32 ರಲ್ಲಿ ನಮ್ಮ ತಂದೆ ಹನುಮಂತಾಚಾರ್ಯ ರಾಘವೇಂದ್ರಚಾರ್ಯ ಗುಡಿ ಇವರು ದಾಖಲೆಯಲ್ಲಿ ಇಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಮದ್ವಾಚಾರ್ಯರಿಂದ ರಾಘವೇಂದ್ರಚಾರ್ಯ ಇವರಿಗೆ ದತ್ತಕಕ್ಕೆ ಹೋದ ನಂತರ ಅವರ ಹೆಸರು ಬದಲಾಗಿರುತ್ತದೆ. ನಿಡಿ-32 ರಲ್ಲಿ ಹನುಮಂತಾಚಾರ್ಯ ದತ್ತಕ ತಂದೆ ಮದ್ವಾಚಾರ್ಯ ಗುಡಿ ಎಂದು ಇಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಯನ್ನು ಹೊರತುಪಡಿಸಿ ನಿಡಿ-32 ರಲ್ಲಿ ಬೇರೆ ಯಾವುದೇ ಆಸ್ತಿಗಳು ಇರುವುದಿಲ್ಲ. ನಿಡಿ-32 ರಲ್ಲಿ ಸರ್ವೆ ನಂ. 246 ಮತ್ತು 256 ಜಮೀನಿನ ಉಲ್ಲೇಖ ಇದೆ ಎನ್ನುವುದು ಸುಳ್ಳು. ಹುಲಿಗಿನಕಟ್ಟಿ ಗ್ರಾಮದ ಸರ್ವೆ ನಂ. 7 ರ ಬಗ್ಗೆ ನಿಡಿ-32 ರಲ್ಲಿ ನಮೂದಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಹನುಮಾಪೂರ ಗ್ರಾಮದ ರಿ ಸ ನಂ. 37, 38 ಮತ್ತು 39 ರ ಬಗ್ಗೆ ಉಲ್ಲೇಖ ಇರುತ್ತದೆ ಎಂಬುದರೆ ಬಗ್ಗೆ ನನಗೆ ಗೊತ್ತಿಲ್ಲ. ಅದೇ ರೀತಿ ವರೂರು ಗ್ರಾಮದ ರಿ ಸ ನಂ. 48 ರ ಉಲ್ಲೇಖ ಇರುತ್ತದೆ ಎಂಬುದರೆ ಬಗ್ಗೆ ನನಗೆ ಗೊತ್ತಿಲ್ಲ. ಎಲ್ಲಾ ಆಸ್ತಿಗಳು ಮದ್ವಾಚಾರ್ಯ ಗುಡಿ ಅವರಿಗೆ ಸೇರಿದ ಆಸ್ತಿಗಳು ಎಂದು ನನಗೆ ಗೊತ್ತಿಲ್ಲ. ಮದ್ವಾಚಾರ್ಯ ರಾಮಾಚಾರ್ಯ ಗುಡಿ ಇವರಿಗೆ ನಿಡಿ-32 ರಲ್ಲಿ ನಮೂದಿಸಿದ

ಹನುಮಂತಾಚಾರ್ಯ ಮದ್ವಾಚಾರ್ಯ ಗುಡಿ ಇವರು ತಮ್ಮನ ಮಗ ಎನ್ನುವುದು ಸುಳ್ಳು. ನಿಡಿ-**32** ರಂತೆ ಮದ್ವಾಚಾರ್ಯ ರವರು ಸಾಮೂಹಿಕವಾಗಿ ಎಲ್ಲಾ ಆಸ್ತಿಗಳಲ್ಲಿ ತನ್ನ ಪಾಲಿನ ಅರ್ಧ ಹಿಸ್ಸೆಯನ್ನು ಹನುಮಂತಾಚಾರ್ಯ ಮದ್ವಾಚಾರ್ಯ ಗುಡಿ ಇವರಿಗೆ ಬಿಟ್ಟು ಕೊಟ್ಟಿದ್ದಾರೆ ಎನ್ನುವುದು ಸುಳ್ಳು. ನಿಡಿ-**32** ರಲ್ಲಿ ನಮೂದಿಸಿದ ಆಸ್ತಿಗಳು ನನಗೆ ಸಂಬಂಧಿಸಿದಲ್ಲ ಎನ್ನುವುದು ನನಗೆ ಗೊತ್ತಿಲ್ಲ. ಮದ್ವಾಚಾರ್ಯ ಗುಡಿ ಇವರು ನಿಡಿ-**32** ರಲ್ಲಿ ನಮೂದಿಸಿದ ಬೇರೆ ಎಲ್ಲಾ ಆಸ್ತಿಗಳನ್ನು ಹೊರತುಪಡಿಸಿ ದಾವಾ ಆಸ್ತಿ ಸರ್ವೆ ನಂ. **89** ನ್ನು ಮಾತ್ರ ನಮಗೆ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಆಸ್ತಿಗಳನ್ನು ಬಿಟ್ಟು ಕೊಟ್ಟ ಬಗ್ಗ ನಿಡಿ-**32** ರಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ನಿಡಿ-**32** ರ ದಾಖಲೆ ನಮಗೆ ಯಾವುದೇ ರೀತಿಯಲ್ಲಿ ಸಂಬಂಧಪಟ್ಟದಲ್ಲ ಎಂದರೆ ಸರಿಯಲ್ಲ.

ಹನುಮಂತಾಚಾರ್ಯ ರಾಘವೇಂದ್ರಚಾರ್ಯ ತ್ರಿವಿಕ್ರಮ ಭಟ್ಟ ಇವರು ನನಗೆ ಯಾವ ರೀತಿ ಸಂಬಂಧ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ನಮ್ಮ ತಂದೆ ಹನುಮಂತಾಚಾರ್ಯ ರಾಘವೇಂದ್ರಚಾರ್ಯ ಗುಡಿ ಇವರಿಗೆ ಸೇರಿದಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿ ಮೂಲತಃ ಹನುಮಂತಾಚಾರ್ಯ ರಾಘವೇಂದ್ರಚಾರ್ಯ ತ್ರಿವಿಕ್ರಮ ಭಟ್ಟ ಇವರಿಗೆ ಸೇರಿದ್ದು ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಹನುಮಂತಾಚಾರ್ಯ ರಾಘವೇಂದ್ರಚಾರ್ಯ ತ್ರಿವಿಕ್ರಮ ಭಟ್ಟ ನಮ್ಮ ತಂದೆ ಅಲ್ಲ. ನಿಡಿ-**32** ರಲ್ಲಿ ನಮೂದಿಸಿದ ಎಲ್ಲಾ ಆಸ್ತಿಗಳು ಹನುಮಂತಾಚಾರ್ಯ ರಾಘವೇಂದ್ರಚಾರ್ಯ ತ್ರಿವಿಕ್ರಮ ಭಟ್ಟ ಇವರ ಹೆಸರಿನಲ್ಲಿ ಇರುತ್ತವೆ ಎನ್ನುವುದು ಸುಳ್ಳು. ಹಕ್ಕು ಬಿಟ್ಟ ಪತ್ರವನ್ನು ಹನುಮಂತಾಚಾರ್ಯ ರಾಘವೇಂದ್ರಚಾರ್ಯ ತ್ರಿವಿಕ್ರಮ ಭಟ್ಟ ಇವರಿಂದ ಬರೆದುಕೊಂಡ ಬಗ್ಗ ನಮೂದಿಸಿಲ್ಲ ಎನ್ನುವುದು ನನಗೆ ಗೊತ್ತಿಲ್ಲ. ಮದ್ವಾಚಾರ್ಯ ರಾಮಾಚಾರ್ಯ ಗುಡಿ ಇವರಿಗೆ ಹನುಮಂತಾಚಾರ್ಯ ರಾಘವೇಂದ್ರಚಾರ್ಯ ತ್ರಿವಿಕ್ರಮ ಭಟ್ಟ ಇವರು ಸಂಬಂಧಿಕರು ಎನ್ನುವುದು ಸರಿಯಲ್ಲ. ನಮ್ಮ ತಂದೆ ದಾವಾ ಆಸ್ತಿಯಲ್ಲಿ ಎಂದಿಗೂ ಕಬ್ಜಾ ವಹಿವಾಟಿಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಅಜ್ಜ ರಾಘವೇಂದ್ರಾಚಾರ್ಯ ಎಂದರೆ ಸರಿ. ನಿಡಿ-**32** ರಲ್ಲಿ ನಮೂದಿಸಿರುವ ಮದ್ವಾಚಾರ್ಯ ಇವರು ಕೂಡಾ ನಮ್ಮ ಅಜ್ಜ. ದತ್ತಕ ನಂತರ ಸದರಿಯವರು ಅಜ್ಜ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. ಹನುಮಂತಾಚಾರ್ಯ ಮದ್ವಾಚಾರ್ಯ ಗುಡಿ ಇವರು ದಿಃ **02.01.1943** ರಂದು ಎಷ್ಟು ವಯಸ್ಸಿನವರು ಆಗಿದ್ದರು ಎಂದು ಹೇಳಲು ಬರುವುದಿಲ್ಲ. ಆ ಸಮಯದಲ್ಲಿ ಪ್ರಾಪ್ತ ಅಥವಾ ಅಪ್ರಾಪ್ತ ವಯಸ್ಸಿನವರು ಇದ್ದರು ಎನ್ನುವುದು ನನಗೆ ಗೊತ್ತಿಲ್ಲ. ಸದರಿಯವರ ಅಲ್ಪವಯಿ ಸೀತಾಬಾಯಿ ಇದ್ದರು ಎನ್ನುವುದು ನನಗೆ ಗೊತ್ತಿಲ್ಲ.

ನನ್ನ ಪ್ರತಿವಾದ ಪತ್ರದಲ್ಲಿ ಹನುಮಂತಾಚಾರ್ಯ ಮದ್ವಾಚಾರ್ಯ ಗುಡಿ ಅವರಿಗೆ ಭಕ್ಷಿಸ ಪತ್ರ ಕೊಟ್ಟ ಬಗ್ಗ ನಮೂದಿಸಿಲ್ಲ ಎಂದರೆ ಸರಿಯಲ್ಲ. ಹಕ್ಕು ಬಿಟ್ಟ ಪತ್ರದಲ್ಲಿ ನಮೂದಿಸಿದ ಬೇರೆ ಆಸ್ತಿಗಳ ಬಗ್ಗ ಪ್ರತಿವಾದ ಪತ್ರದಲ್ಲಿ ನಮೂದಿಸಿಲ್ಲ. **1945** ರಲ್ಲಿ

ತುಳಸಾಬಾಯಿ ಬೃತ ರಾಘವೇಂದ್ರಾಚಾರ್ಯ ಇವರು ಹನುಮಂತ ದತ್ತಕ ತಂದೆ ರಾಘವೇಂದ್ರಚಾರ್ಯ ತ್ರಿವಿಕ್ರಮ ಭಟ್ಟನವರ ರವನ್ನು ದತ್ತಕಕ್ಕೆ ತೆಗೆದುಕೊಂಡಿದ್ದಾರೆ ಎಂದರೆ ಸಾಕ್ಷಿ ದತ್ತಕಕ್ಕೆ ಹೋಗಿರುತ್ತಾರೆ ಆದರೆ ವರ್ಷ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದತ್ತಕದ ಪ್ರಕಾರ ರಾಘವೇಂದ್ರಚಾರ್ಯ ತ್ರಿವಿಕ್ರಮ ಭಟ್ಟ ನವರಿಗೆ ದಾವಾ ಆಸ್ತಿ ಹಾಗೂ ಉಳಿದ ಆಸ್ತಿಗಳನ್ನು ನೀಡಲಾಗಿದೆ ಎನ್ನುವುದು ಸರಿಯಲ್ಲ. ತುಳಸಾಬಾಯಿ ಬೃತ ರಾಘವೇಂದ್ರಾಚಾರ್ಯ ಇವರು ನಮಗೆ ಸಂಬಂಧವಿಲ್ಲ ಎನ್ನುವುದು ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**